ಸುಮಾರು ಐದು ವರ್ಷಗಳ ನಂತರ. ಆಗ ಅವರು ಶಾಲೆಯ ಕೆಲಸ ಬಿಟ್ಟು ಮನೆಯಲ್ಲೇ ಮಕ್ಕಳಿಗೆ ಟ್ಯೂಷನ್ ಹೇಳಲಾರಂಭಿಸಿದರು. ತೊಂದರೆ ಬಂದದ್ದೇ ಮುಂದೆ. ಬೇರೆ ಸ್ನೇಹಿತರು ದೊರೆಯದ ಸಂದರ್ಭದಲ್ಲಿ ಅಜಯ ಕೊಳೆಗೇರಿಯ ಮಕ್ಕಳೊಂದಿಗೇ ಬೆರೆತು ಆಡಲಾರಂಭಿಸಿದ. ಆ ಮಕ್ಕಳೂ ಸದಾ ಮನೆಯಲ್ಲೇ ಠಿಕಾಣಿ ಹಾಕತೊಡಗಿದರು. ಕಾಕೂಗೆ ಬಿಸಿ ತುಪ್ಪದಂತೆ ಉಗುಳಲಾರದ, ನುಂಗಲಾರದ ಪರಿಸ್ಥಿತಿ. ಪ್ರೀತಿಯ ಸ್ವಂತ ಮನೆಯನ್ನು ಬಿಡುವಂತಿಲ್ಲ. ಜೊತೆಗೆ ಮಗನಿಗೆ ಅವರ ಸಹವಾಸವನ್ನು ತಪ್ಪಿಸಬೇಕಾಗಿತ್ತು. ಕೊನೆಗೆ ಕಾಕಾ "ನನ್ನ ಆಫೀಸಿನ ಸಮೀಪ ಒಂದ ಬಾಡಿಗಿ ಮನಿ ಮಾಡೋಣು. ಅಲ್ಲೆ ಪ್ರಸಿದ್ಧ ಸಾಂತಾ ಕ್ಲಾರಾ ಸಾಲ್ಯಾಗ ಅಜಯಗ ಸೀಟು ಹೇಳೇನಿ..." ಎಂದಾಗ ಮಗನಿಗೋಸ್ಕರ ಮೆತ್ತಗಾದರು. ಈ ಮನೆಯನ್ನು ಬಾಡಿಗೆಗೆ ಬಿಟ್ಟರು. "ನನ್ನ ಮನಿ ದುಡೀತದ. ತಿಂಗಳಾ ಬಾಡಿಗಿ ಬರ್ತದ..." ಎಂದು ಹೇಳಿಕೊಳ್ಳುವುದು ಇದ್ದೇ ಇತ್ತು.

ನನ್ನನ್ನು ಪ್ರೀತಿಯಿಂದ "ಪಾಂಡು" ಎಂದು ಕರೆಯುತ್ತಿದ್ದುದು ಕಾಕಾ ಮಾತ್ರ. ಕಾಕು ಮತ್ತು ಅಣ್ಣ ಅಜಯನಿಗೆ ನಾನು "ಪಾಂಡ್ಯಾ"ನೇ. ಇಲ್ಲವಾದರೆ ಕಾಕು "ಪಾಂಡು ಹವಾಲ್ದಾರ್" ಎಂದು ಯಾವುದೋ ಚಿತ್ರದ ಪಾತ್ರಕ್ಕೆ ಹೋಲಿಸಿ ರೇಗಿಸುತ್ತಿದ್ದರು. ಎಲ್ಲಕ್ಕೂ ಗೋಡೆಗೊರಗಿ ತಲೆ ಕೆಳಗೆ ಹಾಕಿ ಸುಮ್ಮನೆ ನಿಲ್ಲುವುದೊಂದೇ ಗೊತ್ತಿತ್ತು. ಮಾನ ಅವಮಾನಗಳು ಅಷ್ಟಾಗಿ ಬಾಧಿಸುತ್ತಿರಲಿಲ್ಲ. ನನ್ನವ್ವ, ಅಪ್ಪನೇ ಅತ್ತಿಗೆಯ ಮೂದಲಿಕೆಗೆ ಮೌನವಾಗಿರುತ್ತಿದ್ದ ಮೇಲೆ ನಾನ್ಯಾವ ಲೆಕ್ಕ? ಅಜಯನಿಗೆ ಗೋಲಿ, ಬುಗುರಿ ಯಾವ ಆಟವೂ ಬರುತ್ತಿರಲಿಲ್ಲ. ನನ್ನ ಸ್ನೇಹಿತರಿಗೆ ಆಗ ಕ್ರಿಕೆಟ್, ಫುಟ್‌ಬಾಲ್‌ಗಳ ಪರಿಚಯ ಅಷ್ಟಕ್ಕಷ್ಟೇ. ಹೀಗಾಗಿ "ಬೋರಾಗ್ತದೋ ಪಾಂಡ್ಯಾ. ಇಸ್ಪೀಟು ಆಡೋಣ ಬಾ" ಎಂದು ಕೂಡಿಸಿ ಕಲಿಸುತ್ತಿದ್ದ. ಅವ್ವ ಅಪ್ಪನಿಗೆ ಇಷ್ಟವಿಲ್ಲದಿದ್ದರೂ ತೆಪ್ಪಗಿರುತ್ತಿದ್ದರು. ಕಾಕು ತಮ್ಮ ಹಳೆಯ ನೈಟಿಯನ್ನು ನನ್ನಕ್ಕ ಯಮುನಾಗೆ ಕೊಟ್ಟು ಹೋಗುತ್ತಿದ್ದರು. ಅವರು ಹೋದ ಮೇಲೆ, "ಸುಮ್ಮನ ಪರಕಾರ ಪೋಲಕಾ ಹಾಕ್ಕೋ. ಅದೇನದು... ಗೋಣಿ ಚೀಲಧಾಂಗ..." ಎಂದು ಅವ್ವ ಬೈದದ್ದಿತ್ತು. ಬರುವಾಗ ಬರಿಗೈಲಿ ಬರುತ್ತಿದ್ದವರು ಹೋಗುವಾಗ ಮೆಣಸಿನಕಾಯಿ, ಅಕಡಿ ಕಾಳು, ಅಕ್ಕಿ, ಜೋಳ, ಚಟ್ನಿಪುಡಿ, ಉಪ್ಪಿನಕಾಯಿ... ಎಂದೆಲ್ಲ ಒಂದು ಹೊರೆ ಸಾಮಾನು ಹೊತ್ತುಕೊಂಡು ಹೋಗುತ್ತಿದ್ದರು.

ಅವರ ಗುಣ ಸ್ವಭಾವಗಳು ಪೂರ್ತಿ ಪರಿಚಯವಾಗಿ ಅಚ್ಚೊತ್ತಿದ್ದು ಪಾಲಿನ ಸಮಯದಲ್ಲಿ. ಆಗ ಯಮುನಾ ಹದಿನಾರು ವರ್ಷದವಳಿರಬೇಕು. ಅವ್ವ ಸಹಜವಾಗಿ, "ಹಳ್ಳಿ ಊರು. ಇನ್ನೊಂದೆರೆಡು ವರ್ಷ ಕಲೀಲಿ. ಆಮ್ಯಾಲೆ ಹಾಂ...ಗ ಹುಡುಕಿ ಮದವಿ ಮಾಡಿಬಿಡೋದ..." ಎಂದಿದ್ದಳು. ಕಾಕೂನ ತಲೆಯಲ್ಲಿ ಸಾವಿರ ಬಲ್ಬುಗಳು ಒಮ್ಮೆಲೆ ಬೆಳಗಿದವು. ಅದೇ ಸಂಜೆ ಕಾಕಾನನ್ನು ಕೆರೆ ಏರಿಗೆ ಕರೆದೊಯ್ದು, "ಯಮುನಾಂದು ಲಗ್ನ ಗೊತ್ತಾತಂದ್ರ ಒಟ್ಟು ಆಸ್ತಿವಳಗಿಂದ ಮಾಡಿಬಿಡ್ತಾರ. ಖರ್ಚಾಗಿಬಿಡ್ತದ. ಅದಕ್ಕ ಈಗ ಪಾಲಾಪಟ್ಟಿ ಮಾಡ್ರಿ" ಎಂದು ಆಗ್ರಹಿಸಿದರು. ಕಾಕಾ, "ಅಷ್ಟು ಗಡಬಡಿ ಮಾಡಬ್ಯಾಡಾ. ನಿಂತ ಕಾಲ ಮ್ಯಾಲೆ ಪಾಲ ಮಾಡ್ರಿ ಅಂದ್ರ ಹಳ್ಳಿ ಊರಾಗ ಛಂದ ಕಾಣಸೂದುಲ್ಲಾ. ಈ ಸಲಾ ವಿಠುಗ ಹೇಳಿ ಹೋಗೋಣಂತ. ಅವರೂ ಎಲ್ಲಾ ವಿಚಾರ ಮಾಡಿ ಇಡ್ಲಿ. ಇನ್ನೊಮ್ಮೆ ಬಂದು ಮಾಡೋಣಂತ" ಎಂದೆಲ್ಲ ಗಿಣಿಗೆ ಹೇಳಿದಂತೆ ಹೇಳಿದರೂ ಪ್ರಯೋಜನವಾಗಲಿಲ್ಲ. ಕಾಕು ತಾವೇ ಅಪ್ಪನ ಮುಂದೆ, "ನಮ್ಮ ಅಜಯನ್ನ ಮುಂದಿನ ವರ್ಷ ಎಂಜಿನಿಯರಿಂಗ್ ಅಥವಾ ಮೆಡಿಕಲ್ ಕಾಲೇಜಿಗೆ ಹಾಕಬೇಕಂತ ಮಾಡೇವಿ. ಅದಕ್ಕೆಲ್ಲಾ ಭಾಳ ರೊಕ್ಕ ಬೇಕಾಗ್ತಾವ. ನಮಗ ಪಾಲ ಮಾಡಿ ಬಿಡ್ರಿ.